46 (98) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಬೀದರ್ ಜಿಲ್ಲೆಯಲ್ಲಿ ಒಂದು ಭಾಷೆಯ ಶಿಕ್ಷಕರಾಗಿ ನೇಮಕಗೊಂಡ ನಂತರ ಬೇರೆ ಭಾಷೆಗೆ ನಿಯೋಜನೆ ಮಾಡುತ್ತಿರುವ ಹಲವಾರು ಪ್ರಕರಣಗಳು ಪತ್ತೆಯಾಗಿರುವುದು ನಿಜವೇ ,

ಆ) ಹಾಗಿದ್ದಲ್ಲಿ, ನಿಯಮಗಳಲ್ಲಿ ಇದಕ್ಕೆ ಅವಕಾಶವಿದೆಯೇ ,

ಇ) ಇಲ್ಲವಾದಲ್ಲಿ, ಇಂತಹ ಪ್ರಕರಣಗಳ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು ?

**ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)**

ಅ) ಬೀದರ್ ಜಿಲ್ಲೆಯಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಒಂದು ಭಾಷೆಯ ಶಿಕ್ಷಕರಾಗಿ ನೇಮಕಗೊಂಡು ನಂತರ ಬೇರೆ ಭಾಷೆಗೆ ನಿಯೋಜನೆ ಮಾಡುತ್ತಿಲ್ಲ

ಆ) ನಿಯಮಗಳಲ್ಲಿ ಅವಕಾಶವಿರುವುದಿಲ್ಲ

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ

47 (99) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಕಳೆದ ಒಂದು ವರ್ಷದ ಅವಧಿಯಿಂದ ಇಲ್ಲಿಯವರೆಗೆ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಲ್ಲಿ ಬೀದರ ಜಿಲ್ಲೆಗೆ ಎಷ್ಟು ಶಾಲಾ ಕೊರಡಿಗಳೂ ಹಾಗೂ ಎಷ್ಟು ಶಾಲಾ ಕಟ್ಟಡಗಳು ಮಂಜೂರು ಮಾಡಲಾಗಿದೆ

ಆ) ಮೇಲ್ಕಂಡ ಅವಧಿಯಲ್ಲಿ ಈ ಕಾರ್ಯಕ್ರಮದಲ್ಲಿ ಎಷ್ಟು ಶಾಲಾ ಕೊರಡಿಗಳು ಹಾಗೂ ಕಟ್ಟಡಗಳನ್ನು ನಿರ್ಮಿಸಲಾಗಿದೆ

ಇ) ಉಳಿದಿರುವ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ (ಶಾಲಾವಾರು ಅಂಕಿ ಅಂಶಗಳಲ್ಲಿ ವಿವರಗಳನ್ನು ಒದಗಿಸುವುದು) ,

ಈ) ಇದಕ್ಕಾಗಿ ಇಲ್ಲಿಯವರೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ಹಾಗೂ ಈ ಪೈಕಿ ಎಷ್ಟು ಹಣ ಖರ್ಚು ಮಾಡಲಾಗಿದೆ (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು)

ಉ) ಈ ಕಾರ್ಯವು ಮಂದಗತಿಯಲ್ಲಿ ಸಾಗುತ್ತಿರುವುದಕ್ಕೆ ಕಾರಣಗಳೇನು ,

ಊ) ನಿಗದಿತ ಅವಧಿಯಲ್ಲಿ ಮೇಲ್ಕಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರದ ಮುಂದಿನ ಕ್ರಮಗಳೇನು ?

**ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು)**

ಅ) 2005–06ನೇ ಸಾಲಿನಲ್ಲಿ 196 ಶಾಲಾ ಕೊರಡಿ 34 ಶಾಲಾ ಕಟ್ಟಡ ಮಂಜೂರಾಗಿದೆ

2006–07ನೇ ಸಾಲಿನಲ್ಲಿ 1580 ಶಾಲಾ ಕೊರಡಿ 34 ಶಾಲಾ ಕಟ್ಟಡ ಮಂಜೂರಾಗಿದೆ

ಆ) 2005–06ನೇ ಸಾಲಿನಲ್ಲಿ 196 ಕೊರಡಿಗಳ ಪೈಕಿ 158 ಕೊರಡಿ ಪೂರ್ಣಗೊಂಡಿದ್ದು ಉಳಿದ 38 ಶಾಲಾ ಕೊರಡಿ ಕಾಮಗಾರಿ ಪ್ರಗತಿಯಲ್ಲಿವೆ

34 ಹೊಸಾ ಶಾಲೆಗಳ ಪೈಕಿ 18 ಹೊಸ ಶಾಲೆ ಪೂರ್ಣಗೊಂಡಿದ್ದು ಉಳಿದ 16 ಹೊಸ ಶಾಲಾ ಕಾಮಗಾರಿ ಪ್ರಗತಿಯಲ್ಲಿವೆ

ಇ) 2006–07ನೇ ಸಾಲಿನಲ್ಲಿ 1580 ಶಾಲಾ ಕೊರಡಿ ಪೈಕಿ 425 ಕಾಮಗಾರಿ ಪ್ರಗತಿಯಲ್ಲಿದೆ 34 ಹೊಸ ಶಾಲೆ ಪೈಕಿ 18 ಕಾಮಗಾರಿ ಪ್ರಗತಿಯಲ್ಲಿದೆ

2005–06 **ಶಾಲಾ ಕೊರಡಿ**

| ಪ್ರಾರಂಭವಾಗಿಲ್ಲ | ಬುನಾದಿ | ಬೇಸ್‌ಮೆಂಟ್ | ಲಿಂಟಲ್ | ರೂಫ್ | ಫಿನಿಶಿಂಗ್ |
|---|---|---|---|---|---|
| 01 | 02 | 03 | 05 | 16 | 11 |
| ಪೂರ್ಣ | | | | | |
| 158 | | | | | |

2005–06 **ಹೊಸ ಶಾಲಾ**

| ಪ್ರಾರಂಭವಾಗಿಲ್ಲ | ಬುನಾದಿ | ಬೇಸ್‌ಮೆಂಟ್ | ಲಿಂಟಲ್ | ರೂಫ್ | ಫಿನಿಶಿಂಗ್ |
|---|---|---|---|---|---|
| 01 | 0 | 0 | 04 | 05 | 06 |
| ಪೂರ್ಣ | | | | | |
| 18 | | | | | |

2006–07 **ಶಾಲಾ ಕೊರಡಿ**

| ಪ್ರಾರಂಭವಾಗಿಲ್ಲ | ಬುನಾದಿ | ಬೇಸ್‌ಮೆಂಟ್ | ಲಿಂಟಲ್ | ರೂಫ್ | ಫಿನಿಶಿಂಗ್ |
|---|---|---|---|---|---|
| 1155 | 223 | 178 | 22 | 02 | 0 |
| ಪೂರ್ಣ | | | | | |
| 0 | | | | | |

2006–07 ಹೊಸ ಶಾಲಾ

| ಪ್ರಾರಂಭವಾಗಿಲ್ಲ | ಬುನಾದಿ | ಬೇಸ್‌ಮೆಂಟ್ | ಲಿಂಟಲ್ | ರೂಫ್ | ಫಿನಿಶಿಂಗ್ |
|---|---|---|---|---|---|
| 16 | 08 | 05 | 04 | 01 | 0 |

ಪೂರ್ಣ

0

ಈ) 2005–06ನೇ ಸಾಲಿನ ಹಣ ಬಿಡುಗಡೆಯಾಗಿ ಹಾಗೂ ಆದರ ಪೈಕಿ ಹಣ ಖರ್ಚು ಮಾಡಿದ ವಿವರ

| ಜಿಲ್ಲೆ | ಶಾಲೆಗಳ ಸಂಖ್ಯೆ | ಬಿಡುಗಡೆಯಾದ ಹಣ | ಖರ್ಚಾದ ಹಣ |
|---|---|---|---|
| 1) ಬೀದರ | | | |
| ಶಾಲಾ ಕೊಠಡಿ | 30 | 45 0 ಲಕ್ಷ | 37 38 ಲಕ್ಷ |
| ಶಾಲಾ ಕಟ್ಟಡ | 12 | 49 20 ಲಕ್ಷ | 41 60 ಲಕ್ಷ |
| 2) ಬಸವಕಲ್ಯಾಣ | | | |
| ಶಾಲಾ ಕೊಠಡಿ | 46 | 69 0 ಲಕ್ಷ | 66 25 ಲಕ್ಷ |
| ಶಾಲಾ ಕಟ್ಟಡ | 02 | 8 20 ಲಕ್ಷ | 6 90 ಲಕ್ಷ |
| 3) ಭಾಲ್ಕಿ | | | |
| ಶಾಲಾ ಕೊಠಡಿ | 39 | 58 50 ಲಕ್ಷ | 50 80 ಲಕ್ಷ |
| ಶಾಲಾ ಕಟ್ಟಡ | 09 | 35 9 ಲಕ್ಷ | 32 03 ಲಕ್ಷ |
| 4) ಬೀದರ | | | |
| ಶಾಲಾ ಕೊಠಡಿ | 46 | 69 0 ಲಕ್ಷ | 94 275 ಲಕ್ಷ |
| ಶಾಲಾ ಕಟ್ಟಡ | 08 | 32 8 ಲಕ್ಷ | 30 180 ಲಕ್ಷ |
| 5) ಹುಮನಾಬಾದ | | | |
| ಶಾಲಾ ಕೊಠಡಿ | 35 | 32 5 ಲಕ್ಷ | 49 70 ಲಕ್ಷ |
| ಶಾಲಾ ಕಟ್ಟಡ | 03 | 12 3 ಲಕ್ಷ | 8 20 ಲಕ್ಷ |
| ಒಟ್ಟು | | 433 50 ಲಕ್ಷ | 388 375 ಲಕ್ಷ |

2006–07ನೇ ಸಾಲಿನ ಹೊಸ ಶಾಲಾ, ಹೆಚ್ಚುವರಿ ಕೊಠಡಿಗಳ ಹಣ ಬಿಡುಗಡೆ ಮಾಡಿದ ವಿವರ ಈ ಕೆಳಕಂಡಂತಿದೆ

ಹೊಸ ಶಾಲೆ ಒಟ್ಟು 34 ಶಾಲೆಗಳಿಗೆ = 114 07 ಲಕ್ಷ ಬಿಡುಗಡೆ ಮಾಡಲಾಗಿದೆ ಹಾಗೂ ಹೆಚ್ಚುವರಿ ಕೊಠಡಿ ಒಟ್ಟು 1580 ಶಾಲೆಗಳಿಗೆ = 1271 90 ಲಕ್ಷ ಬಿಡುಗಡೆ ಮಾಡಲಾಗಿದೆ ಇದರಲ್ಲಿ 14 00 ಲಕ್ಷ ಹೊಸ ಶಾಲೆ ಹಾಗೂ 180 16 ಲಕ್ಷ ಹೆಚ್ಚುವರಿ ಕೊಠಡಿಗೆ ಖರ್ಚು ಆಗಿರುತ್ತದೆ

ಉ) ಎಸ್ ಡಿ ಎಂ ರಚನೆ ವಿಳಂಬದ ಕಾರಣ ಹಾಗೂ

ಜಿಲ್ಲಾ ಪಂಚಾಯತ್ ಅವರಿಂದ ಎಸ್ ಡಿ ಎಂ ಸಿಗೆ ಕೆಲಸ ಕೊಡಬಾರದೆಂದು ತಿಳಿಸಿದ್ದರ ಮೇರೆಗೆ ಸಿವಿಲ್ ಕಾಮಗಾರಿಗಳು ಮಂದಗತಿಯಿಂದ ಸಾಗಿವೆ

ಊ) 1) ಈ ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣ ಗೊಳಿಸಲು ಎಸ್ ಡಿ ಎಂ ಸಿ ಯವರ ಸಭೆ ನಡೆಸಲಾಗಿದ್ದು ನಿಖರವಾದ ಸಮಯದಲ್ಲಿ ಮುಗಿಸಲು ತಿಳಿಸಲಾಗಿದೆ

2) ಎಲ್ಲಾ ಮುಖ್ಯ ಅಧ್ಯಾಪಕರಿಗೆ ಸಮಯಾನುಸಾರ ಮುಗಿಸಲು ತಾಕಿತು ಮಾಡಲಾಗಿದೆ

48 (104) ಶ್ರೀ ಪಾಟೀಲ್ ಡಿ ಆರ್ (ಗದಗ್) ಮಾನ್ಯ ಪ್ರಾಧಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಪ್ರಾಧಮಿಕ ಮತ್ತು ಪ್ರೌಢ ಶಿಕ್ಷಣ ಕಲಿಯುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಮೌಲ್ಯ ಶಿಕ್ಷಣ ಒದಗಿಸಲು ಈಗಿರುವುದಕ್ಕಿಂತ ಉತ್ತಮ ವ್ಯವಸ್ಥೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ,

ಆ) ಈಗಿನ ಆರ್ಥಿಕ ಬೆಳವಣಿಗೆಯ ಕಾಲದಲ್ಲಿ ಜನಜೀವನ ಸರಿದಾರಿಯ ಮೇಲೆ ಇರಲು ಮೌಲ್ಯ ಶಿಕ್ಷಣ ಅವಶ್ಯಕತೆ ಬಹಳ ಅಗತ್ಯವಾಗಿರುವುದು ಸರ್ಕಾರಕ್ಕೆ ಮನದಟ್ಟಾಗಿದೆಯೇ,

ಇ) ಇದಕ್ಕಾಗಿ ಸರ್ಕಾರ ಯೋಚಿಸಿರುವ ಕ್ರಮಗಳಾವುವು ,

ಈ) ಈ ಸುವರ್ಣ ಕರ್ನಾಟಕದ ಆಚರಣೆಯ ಸಂದರ್ಭದಲ್ಲಿ ಇದನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಅನುಷ್ಠಾನಗೊಳಿಸಲಾಗುವುದೇ ,

ಉ) ಇದಕ್ಕಾಗಿ ಬೇಕಾಗುವ ಅನುಕೂಲತೆಗಳೇನು ,

ಊ) ಸರ್ಕಾರ ಯಾವ ಯಾವ ಅನುಕೂಲತೆ ಒದಗಿಸುವುದು ?

**ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಧಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ) 1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಉಲ್ಲೇಖಿಸಿರುವ 10 ಕೋರ್ ಎಲಿಮೆಂಟ್ಸ್ ಮತ್ತು 84 ಕೋರ್ ವ್ಯಾಲ್ಯೂಗಳನ್ನು (Human Values) ಆಧಾರವಾಗಿಟ್ಟುಕೊಂಡು ಪ್ರಸ್ತುತ ಪರ್ಯವಸ್ತು ಮತ್ತು